ಶ್ರೀ ದಿನೇಶ್ ಗುಂಡುರಾವ್(ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ನಾವು ಹಿಂದೊಮ್ಮೆ ಇದರ ಬಗ್ಗೆ ಮಾತನಾಡಿದಾಗಲೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹಾಗೂ ಸಧ್ಯದಲ್ಲಿ ಮಾಡುತ್ತೇವೆಂದು ಹೇಳಿದ ಜಾಸನಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೂ ಇದು ಬಹಳ ತಡವಾಗುತ್ತಿದೆ. ಇದನ್ನು ಮಾಡಬೇಕೆಂದು ಸರ್ಕಾರಕ್ಕೆ ಮನಸ್ಸು ಬಂದರೆ ಖಂಡಿತವಾಗಿ ಮಾಡಬಹುದು. ಮಹಾನಗರ ಪಾಲಿಕೆಗಳು ಹಾಗೂ ಪೌರನಿಗಮಗಳಲ್ಲಿ ವರ್ಗಾವಣೆ ಮಾಡುವ ಅವಕಾಶ ಕಲ್ಪಿಸಬೇಕು. ಇದನ್ನು ಆದಷ್ಟು ಬೇಗ ಮಾಡಿದರೆ ಈ ಪಾಲಿಕೆ ಹಾಗೂ ನಿಗಮಗಳಲ್ಲಿ ಏನು ವ್ಯವಸ್ಥೆ ಇದೆ ಅದನ್ನು ಸರಿ ಮಾಡುವುದಕ್ಕೆ ಅವಕಾಶವಾಗುತ್ತದೆ. ವರ್ಗಾವಣೆ ಮಾಡಿದರೆ ಅಧಿಕಾರಿಗಳು ಹಿಡಿತಕ್ಕೆ ಸಿಗತಕ್ಕಂಥ, ಅಕೌಂಟಬಿಲಿಟಿ ಆಗತಕ್ಕಂಥ ವ್ಯವಸ್ಥೆ ಬರುತ್ತದೆ. ಆದುದರಿಂದ ತಮ್ಮ ಮೂಲಕ, ಸರ್ಕಾರದಲ್ಲಿ ಬಹಳ ವರ್ಷಗಳಿಂದ ಇದು ಆಗಬೇಕೆಂದು ಇದೆ, ಇದರ ಬಗ್ಗೆ ಈಗ ಇರುವ ಪ್ರಂದ ಹಾಗೂ ನೇಮಕಾತಿಯ ನಿಯಮಗಳಿಗೆ ತಿದ್ದುಪಡಿ ತಂದು ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ಈ ಮೂಲಕ ಮಾನ್ಯ ಸದಸ್ಯರಿಗೆ ಸ್ಪಷ್ಟೀಕರಣಗೊಳಿಸುವುದೇನೆಂದರೆ, ಅಡಳಿತದಲ್ಲಿ ಸುಧಾರಣೆ ತರಬೇಕು, ಆದರಲ್ಲೂ ಈ ಮಹಾನಗರಪಾಲಿಕೆ, ಮುನಿಸಿಪಾಲಿಟಿ ಇತ್ಯಾದಿಗಳಲ್ಲಿ ನೌಕರರ ಮೇಲೆ ಸರ್ಕಾರದ ಹಿಡಿತ ಇರಬೇಕು ಎನ್ನುವುದರಲ್ಲಿ ಸರ್ಕಾರದ ಎರಡನೆಯ ಅಭಿಪ್ರಾಯವಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡು ಒಂದು ಸಮಿತಿಯನ್ನು ರಚಿಸಿತ್ತು, ಅದು ತನ್ನ ವರದಿಯನ್ನು ಕೊಟ್ಟಿದೆ; ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಯಾವ್ಯಾವ ಕಾನೂನುಗಳನ್ನು ತಿದ್ದುಪಡಿ ಮಾಡಲಾಗಿದೆ., ಅದನ್ನು ಮುಂದಿನ ಅಧಿವೇಶನದಲ್ಲಿ ತಂದು ಸದನದ ಒಪ್ಪಿಗೆಯನ್ನು ಪಡೆಯುವ ಪ್ರಯತ್ನವನ್ನು ಮಾಡಲಾಗುವುದು. ನೌಕರರ ವರ್ಗಾವಣೆ ಬಗ್ಗೆ ಸರ್ಕಾರ ಆಸಕ್ತಿಯನ್ನು ಹೊಂದಿರುತ್ತದೆ. ಈ ಬಗ್ಗೆ ಎರಡನೇ ಮಾತಿಲ್ಲ.

ವಿಷಯ: (ಉ) ಕೊಪ್ಪಳ ಜಿಲ್ಲೆಯಲ್ಲಿ ಬೇವಿನ ಹಳ್ಳಿ ಗ್ರಾಮದ ರೈತರು ಹಾಗೂ ಸಾರ್ವಜನಿಕರು ಕಿರ್ಲೋಸ್ಕರ್ ಫ್ಯಾಕ್ಟರಿಯಿಂದ ಬರುವ ಹೊಗೆ ಮತ್ತು ಕಬ್ಬಿಣದ ಅದಿರಿನ ತುಣುಕಿನಿಂದ ಆರೋಗ್ಯಕ್ಕೆ ಹಾನಿಯಾಗಿರುವ ಬಗ್ಗೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ(ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಮಾನ್ಯ ಪರಿಸರ ಅರಣ್ಯ ಹಾಗೂ ಜೀವಿಶಾಸ್ತ್ರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

+ ಶ್ರೀ ಕೆ.ಹೆಚ್. ರಂಗನಾಥ್(ಮಾನ್ಯ ಅರಣ್ಯ ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ. ಮೆ: ಕಿರ್ಲೋಸ್ಕರ್ ಫೆರಸ್ ಕಾರ್ಖಾನೆ, ಸರ್ವೆ ನಂ.61 ರಿಂದ 78:2, ಬೇವಿನಹಳ್ಳಿ ಗ್ರಾಮದಲ್ಲಿ 1994ರಲ್ಲಿ ಸ್ಥಾಪನೆಗೊಂಡಿದೆ. ಈ ಘಟಕವು PIG IRON ಮತ್ತು CAST IRON ತಯಾರಿಸುವ ಉದ್ದಿಮೆಯಾಗಿದ್ದು, 2,40,000 ಮತ್ತು 30,000 TP/A ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ. ಮುಖ್ಯವಾದ ಕಚ್ಚಾವಸ್ತುಗಳು ಕಬ್ಬಿಣದ ಅದಿರು, ಸುಣ್ಣದ ಕಲ್ಲು ಬೆಣಚು ಕಲ್ಲು ಕೋಕ್ ಮತ್ತು ಡೋಲಾಮೈಟ್ಸ್‌ಗಳು ಈ ಉದ್ದಿಮೆಯ

ಸ್ಥಾಪನೆಗೆ ಮಂಡಳಿಯಿಂದ 5.1.94ರಲ್ಲಿ ಸಮ್ಮತಿ ಪತ್ರ ನೀಡಲಾಗಿದೆ. ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಸದರಿ ಉದ್ದಿಮೆಗೆ ದಿನಾಂಕ 19-4-2000 ರಂದು ಪರಿಸರ ವಿಮೋಚನಾ ಪತ್ರ (ENVIRONMENTAL CLEARANCE) ನೀಡಿರುತ್ತದೆ.

ಮೇಲೆ ತಿಳಿಸಿರುವ ಉತ್ಪನ್ನಗಳನ್ನು ತಯಾರಿಸುವಲ್ಲಿ ನೀರನ್ನು ಶೀಥಲೀಕರಣಕ್ಕೋಸ್ಕರ ಉಪಯೋಗಿಸುತ್ತಾರೆ. ಗೃಹ ಬಳಕೆಯ ನೀರನ್ನು ಸಂಸ್ಕರಣ ಘಟಕಗಳಲ್ಲಿ ಶುದ್ದೀಕರಿಸಿ ನಂತರ ಕಾರ್ಖಾನೆಯ ತೋಟಗಾರಿಕೆಗೆ ಬಳಸುತ್ತಿದ್ದಾರೆ.

ವಾಯು ಮಾಲಿನ್ಯ ನಿಯಂತ್ರಣ:

ಉದ್ದಿಮೆಯಲ್ಲಿ ಮುಖ್ಯವಾಗಿ ಹೊಗೆ ಬರುವ ಮೂಲಗಳು ಹಾಗೂ ಮಾಲಿನ್ಯ ನಿಯಂತ್ರಣ ವ್ಯವಸ್ಥೆ ಕೆಳಕಂಡಂತಿರುತ್ತದೆ.

ಎ) ಪಿಗ್ ಐರನ್ ಯೂನಿಟ್-1	ಮಾಲಿನ್ಯ ನಿಯಂತ್ರಣ ವ್ಯವಸ್ಥೆ ಚಿಮಣಿ ಎತ್ತರ	ಮಾಲಿನ್ಯ ನಿಯಂತ್ರಣ ಘಟಕ
1. ಬಾಯ್ಲರ್	58 mtr.	-
2. ಬ್ಲಾಸ್ಟ್ ಫರ್ನೇಸ್-1	-	Venturi Scrubber. Dust Catcher.
3. ಮೆಟಾಲಿಕ್ ಬ್ಲಾಸ್ಟ್ ಫ್ರೀ ಹೀಟರ್-1	30 mtr.	-
4. ಫ್ಲೇರ್ ಸ್ಟಾಕ್-1	30 mtr.	-
ಬಿ) ಪಿಗ್ ಐರನ್ ಯೂನಿಟ್-11		
1. ಬಾಯ್ಲರ್	58 mtr.	-
2. ಬ್ಲಾಸ್ಟ್ ಫರ್ನೇಸ್-11	-	Venturi Scrubber. Dry dust catcher.
3. ಮೆಟಾಲಿಕ್ ಬ್ಲಾಸ್ಟ್ ಫ್ರೀ ಹೀಟರ್-11	30 mtr.	-
4. ಫ್ಲೇರ್ ಸ್ಟಾಕ್-11	30 mtr.	-
ಸಿ) ಫೌಂಡ್ರಿ ಯೂನಿಟ್:		
1) ಇಂಡಕ್ಷನ್ ಫರ್ನೇಸ್	24 mtr.	Fume extraction System
2) ಕೋಕ್ ಹ್ಯಾಡ್ಲಿಂಗ್ ಘಟಕಗಳು	ಕಚ್ಚಾ ವಸ್ತುಗಳ ಶೇಖರಣೆ ಮಾಡುವ ಸ್ಥಳದಲ್ಲಿ ನೀರನ್ನು ಚಿಮುಕಿಸುವುದು	

ಈ ಎಲ್ಲಾ ಹೊಗೆ ಬರುವ ಮೂಲಗಳಿಗೆ ಕಾರ್ಖಾನೆಯವರು ಮಂಡಳಿಯು ನಿಗದಿಪಡಿಸಿದ ಚಿಮಣಿಗಳ ಎತ್ತರ ಹಾಗೂ ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿರುತ್ತಾರೆ.

ಮಂಡಳಿಯು ದಿನಾಂಕ 5-12-2000ರಂದು ಬೇವಿನಹಳ್ಳಿಯಲ್ಲಿ ವಾಯು ಮಾಲಿನ್ಯ ಮಾಪನ ಮಾಡಿದ್ದು, ಈ ಮಾಪನದ ವರದಿಯಂತೆ ಈ ಪ್ರದೇಶದಲ್ಲಿ ಧೂಳಿನ ಪ್ರಮಾಣವು 147 mg/NM3 ಇದ್ದು, ನಿಗದಿತ ಪ್ರಮಾಣ 150 mg/NM3 ಗಿಂತ ಕಡಿಮೆ ಇರುವುದು ಕಂಡು ಬಂದಿದೆ.

ಘನ ತ್ಯಾಜ್ಯ ವಸ್ತುಗಳು:

ಉದ್ದಿಮೆಯಿಂದ ಸುಮಾರು 8640 T/day ನಷ್ಟು ಘನ ತ್ಯಾಜ್ಯವಸ್ತುಗಳನ್ನು ಉತ್ಪತ್ತಿಯಾಗುತ್ತವೆ.

Granulated and ungranulated slag ನ್ನು ಸಿಮೆಂಟ್ ತಯಾರಿಸುವ ಘಟಕಗಳಿಗೆ ಕೊಡಲಾಗುತ್ತಿದ್ದು ಹಾಗೂ ಬೇರೆ ಘನ ತ್ಯಾಜ್ಯ ವಸ್ತುಗಳು ಕಾರ್ಖಾನೆಯ ಒಳಗಡೆ ಹಾಗೂ ಹೊರಗಡೆ ಇರುವ ತಗ್ಗು ಪ್ರದೇಶಗಳನ್ನು ತುಂಬಲು ಉಪಯೋಗಿಸುತ್ತಿದ್ದಾರೆ.

ಇಂದಿನ ವಿವರ:

1. ಜಲ ಹಾಗೂ ವಾಯುಮಾಲಿನ್ಯ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಮಂಡಳಿಯು ಕಾರ್ಖಾನೆಗೆ 30-6-2001ರವರೆಗೆ ಸಮ್ಮತಿ ಪತ್ರ ನೀಡಿರುತ್ತದೆ. ಈ ಉದ್ದಿಮೆಯಿಂದ ಬರುವ ಗೃಹ ಬಳಕೆ ನೀರನ್ನು (TOILET EFFLUENIT) ಶುದ್ದೀಕರಿಸಲಾಗುತ್ತಿದೆ. ಹಾಗೂ ಇದನ್ನು ತೋಟಗಾರಿಕೆಗೆ ಉಪಯೋಗಿಸಲಾಗುತ್ತಿದೆ. ಉತ್ಪಾದನಾ ಚಟುವಟಿಕೆಯಿಂದ ಕಲುಷಿತ ನೀರು ಹೊರಬರುವುದಿಲ್ಲ.

2. ಉದ್ದಿಮೆಯು ಮೂರು ವಾಯುಮಾಪನ ಕೇಂದ್ರ (A.A.Q) ಗಳನ್ನು ಸ್ಥಾಪಿಸಿದ್ದು ಇವುಗಳಲ್ಲಿ 2 ಕೇಂದ್ರಗಳು ಉದ್ದಿಮೆಯ ಒಳಭಾಗದಲ್ಲಿ ಹಾಗೂ ಒಂದು ಕೇಂದ್ರ, ಬೇವಿನಹಳ್ಳಿ ಗ್ರಾಮದಲ್ಲಿದೆ.

3. ಧೂಳನ್ನು ನಿಯಂತ್ರಿಸಲು ನಿರಂತರವಾಗಿ ಟ್ಯಾಂಕರುಗಳಿಂದ ರಸ್ತೆಯ ಮೇಲೆ ನೀರನ್ನು ಚಿಮುಕಿಸುವ ವ್ಯವಸ್ಥೆ ಮಾಡಿರುತ್ತಾರೆ. ಮತ್ತು ಕಚ್ಚಾ ವಸ್ತುಗಳನ್ನು ಶೇಖರಣೆ ಮಾಡುವ ಸ್ಥಳದಲ್ಲಿ ಪೈಪಿನಿಂದ ನೀರನ್ನು ಚಿಮುಕಿಸುವ (WATER SPRINLEING SYSTEM) ವ್ಯವಸ್ಥೆಯನ್ನು ಹೊಂದಿರುತ್ತಾರೆ.

4. ಕಚ್ಚಾ ವಸ್ತುಗಳನ್ನು ಸಾಗಿಸುವ ವಾಹನಗಳಿಗೆ ನಿರ್ದಿಷ್ಟವಾದ ವ್ಯವಸ್ಥಿತ ರಸ್ತೆಯನ್ನು ನಿರ್ಮಿಸಿರುತ್ತಾರೆ.

5. ಮೆ:ಕಿರ್ಲೋಸ್ಕರ್ ಫ್ಯಾಕ್ಟರಿಯಿಂದ ಬರುವ ಹೊಗೆಯನ್ನು ಹಾಗೂ ಕಬ್ಬಿಣ ತುಣುಕಿನಿಂದ ನಿಯಂತ್ರಿಸಲು ಕಾರ್ಖಾನೆಯ ದಕ್ಷಿಣ ತುದಿಯಿಂದ ಪೂರ್ವದ ತುದಿಯವರೆಗೆ ಕ್ರಮವಾಗಿ ಏಳು ಸಾಲಿನಲ್ಲಿ ಹಾಗೂ ಐದು ಸಾಲಿನಲ್ಲಿ ಗಿಡಗಳನ್ನು ಕಾರ್ಖಾನೆ ಕಾಂಪೌಂಡಿನ ಸುತ್ತಲೂ ಬೆಳೆಸಿರುತ್ತಾರೆ.

6. ರೈತರ ಬೆಳೆಗಳ ಮೇಲೆ ಕೈಗಾರಿಕೆಗಳಿಂದ ಬರುವ ಧೂಳು ಮತ್ತು ಕಬ್ಬಿಣದ ಅದಿರಿನ ತುಣುಕಿನಿಂದ ಆಗುವ ಹಾನಿಯ ಬಗ್ಗೆ ಮತ್ತು ಬೆಳೆಯ ಉತ್ಪನ್ನದ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಕಾರ್ಖಾನೆಯವರು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಈ ಯೋಜನೆಯನ್ನು ವಹಿಸಿಕೊಟ್ಟಿರುತ್ತಾರೆ. ಹಾಗೂ ಕೃಷಿ ವಿಶ್ವವಿದ್ಯಾನಿಲಯ ಧಾರವಾಡ ಇವರು ಸದರಿ ವಿಷಯದ ಬಗ್ಗೆ ಅಧ್ಯಯನ ಮಾಡುತ್ತಿದ್ದು ವರದಿಯನ್ನು ಸಲ್ಲಿಸುವ ಹಂತದಲ್ಲಿದ್ದಾರೆ.

7. ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಎದುರು ಬೇವಿನಹಳ್ಳಿ ಗ್ರಾಮದ ರೈತರು ಮತ್ತು ಸಾರ್ವಜನಿಕರು ಸದರಿ ಕಾರ್ಖಾನೆಯಿಂದಾಗುವ ಪರಿಸರ ಮಲಿನತೆಯ ವಿಷಯವಲ್ಲದೆ ಬೇರೆ ವಿಷಯಗಳು ಅಂದರೆ ನೌಕರಿ ಇತ್ಯಾದಿಗಳು, ಸತ್ಯಾಗ್ರಹ ಮಾಡಲು ಸೇರಿ ಕಾರಣವಾಗಿದಂತಿಂದು ಮತ್ತು ಸತ್ಯಾಗ್ರಹವನ್ನು ಮೂರು ದಿನಗಳ ಹಿಂದೆ ನಿಲ್ಲಿಸಿರುವರೆಂದು ತಿಳಿದುಬಂದಿದೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ: ಈ ಕಾರ್ಖಾನೆಯು 1994ರಲ್ಲಿ ಆರಂಭವಾಯಿತು. ಅಲ್ಲಿಯ ರೈತರು ಬೆಳೆಯನ್ನು ಬೆಳೆಯುತ್ತಿಲ್ಲ, ಜೊತೆಗೆ ರೈತರ ಆರೋಗ್ಯ ಕೂಡ ಕೆಟ್ಟಿರುತ್ತದೆ, ಇಂತಹ ಪರಿಸ್ಥಿತಿಯಲ್ಲಿ ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಅಲ್ಲಿ ರೈತರ ಪರಿಸ್ಥಿತಿ ತುಂಬಾ ಗಂಭೀರವಾಗಿರುತ್ತದೆ, ಈ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟವಾಗಿ ಉತ್ತರವನ್ನು ಕೇಳಬಯಸುತ್ತೇನೆ.

7.10 ಪಿ.ಎಂ

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ನಾನು ಒಂದು ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಘೋರ್ಪಡೆಯವರಿಗೆ ಸಂಬಂಧಪಟ್ಟ ಹಾಗೆ ಕೇಳಿದ್ದೆ. ಇವತ್ತೆ ಹೊನೇ ದಿವಸ. ನನಗೆ ಇಲ್ಲಿಯವರೆಗೂ ಉತ್ತರ ಬರಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಂಗಣ್ಣ ಅಮರಪ್ಪ ಅವರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ, ಅದಕ್ಕೆ ಸರ್ಕಾರ ಸ್ಪಂದಿಸಲು ಇಚ್ಛಿಪಡುತ್ತದೆ. ಮತ್ತು ಈಗ ಇದರ ಬಗ್ಗೆ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ವರದಿ ಕೊಡಲು ಏನು ಹೇಳಿದ್ದಾರೆ, ಅದು ಬಂದಮೇಲೆ, ಅವರು ಏನು ವರದಿ ಕೊಡುತ್ತಾರೆ ಎನ್ನುವುದನ್ನು ನೋಡಿ, ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಎಲ್ಲಾ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಇನ್ನು ಮುಂದಿನ ಗಮನ ಸೆಳೆಯುವ ಸೂಚನೆ ಓಪೆಕ್ ಆಸ್ಪತ್ರೆ ಬಗ್ಗೆ ಮಾನ್ಯ ಸಿಂಧ್ಯರವರು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಓಪೆಕ್ ಆಸ್ಪತ್ರೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಲೇ ಉತ್ತರ ಕೊಟ್ಟಿದ್ದಾರೆ. ಆದರೆ ಈಗ ನಾನು ಮತ್ತು ಶ್ರೀಮಾನ್ ಭೈರೇಗೌಡರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವು. ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇವೆ.

ಶ್ರೀ ಸಂಗಪ್ಪ ಅಮರಪ್ಪ ಕರಡಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿದಂತಹ ವಿಚಾರದ ಬಗ್ಗೆ ಮಾಹಿತಿ ಕೇಳಲು ಸಂಬಂಧಪಟ್ಟ ಶಾಸಕರು ಎದ್ದು ನಿಂತಿದ್ದಾರೆ.

ಶ್ರೀ ಶ್ರೀರಂಗದೇವರಾಯಲು: ಮಾನ್ಯ ಅಧ್ಯಕ್ಷರೆ, ಬೇವಿನ ಹಳ್ಳಿಯ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರು, ಅವರ ಬಗ್ಗೆ ವಿಚಾರ ಮಾಡಲು ಒಂದು ಸಮಿತಿ ಮಾಡಿದ್ದು, ಅದರಲ್ಲಿ ಚೀಫ್ ಸೆಕ್ರೆಟರಿ, ಜಿಲ್ಲಾಧಿಕಾರಿಗಳು ಹಾಗೂ ಊರಿನ ಕೆಲವು ರೈತರು ಇದ್ದರು. ಆ ಸಮಿತಿ ಮೀಟಿಂಗ್ ಸೇರುತ್ತಿದ್ದು, ಇತ್ತೀಚೆಗೆ ಏಕೋ ಸೇರಿಲ್ಲ. ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಹಾಗೂ ಅಲ್ಲಿ ಜಿಲ್ಲಾಧಿಕಾರಿಗಳು ಚೇಂಜ್ ಆದಮೇಲೆ ಇವರ ಬಗ್ಗೆ ಏನು ಮಾಹಿತಿ ಬಂದಿಲ್ಲ. ಆ ಊರಿನಲ್ಲಿ ಒಂದು ಆಸ್ಪತ್ರೆ ಹಾಗೂ ಸ್ಕೂಲ್ ಕಟ್ಟಿಸಿಕೊಡಿ ಎಂದು ಕೇಳಿದ್ದೇವೆ. ಆದರೆ ಈಗ ಅಲ್ಲಿ ಮಾಡಿದರೆ ತೊಂದರೆಯಾಗುತ್ತದೆ. ಆದುದರಿಂದ ಊರನ್ನು ಬೇರೆ ಕಡೆ ಹೋಗುವುದಕ್ಕೆ ಅವಕಾಶ ಮಾಡಿದರೆ ಒಳ್ಳೆಯದು.

ಶ್ರೀ ಕೆ.ಜೆ.ಜಿ. ರಂಗನಾಥ್: ಮಾನ್ಯ ಅಧ್ಯಕ್ಷರೆ, 1994ರಲ್ಲಿ ಸ್ಥಾಪನೆಯಾಗಿರತಕ್ಕಂಥ ಕಾರ್ಖಾನೆ ಇದು. ನನಗೆ ಬಂದ ವರದಿ ಪ್ರಕಾರ ಆ ಕಾರ್ಖಾನೆ ಆ ಹಳ್ಳಿಯ ಹತ್ತಿರದಲ್ಲಿ ಇದೆ ಎಂದು ಗೊತ್ತಾಗಿದೆ. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದವರು ಏನು ವರದಿ ಕೊಡುತ್ತಾರೆ ಎನ್ನುವುದನ್ನು ನೋಡಿ ಅದರ ಮೇಲೆ ವಿಚಾರ ಮಾಡಬೇಕು. ಆದರೆ ಅವರು ಊರು ಬೇರೆ ಕಡೆಗೆ ಹೋಗಬೇಕೆಂದು ಏನು ಹೇಳುತ್ತಿದ್ದಾರೆ ಅದು ನನ್ನ ಗಮನಕ್ಕೆ ಬರುವುದಿಲ್ಲ.

10. ಪ್ರಕಟಣೆ

ಅಧ್ಯಕ್ಷರು: ಈಗ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

1. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ನಿಯಮ 118ರ ಮೇರೆಗೆ ದಿನಾಂಕ 31.3.2001ರಂದು, ಕರ್ನಾಟಕ ಆಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2001 ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ.

2. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ನಿಯಮ 118ರ ಮೇರೆಗೆ ದಿನಾಂಕ 31.3.2001ರಂದು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2001 ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಓಪೆಕ್ ಆಸ್ಪತ್ರೆ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಚನ್ನಮೇಗೌಡರು, ನಾನು ಮತ್ತು ಮಾನ್ಯ ಭೈರೇಗೌಡರು ಹಾಗೂ ಮಾನ್ಯ ಸೋಮಶೇಖರ್‌ರವರು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಬೇಗ ಊರಿಗೆ ಹೋಗಬೇಕು ಆದ್ದರಿಂದ ಈ ಸದನವನ್ನು ತಾವು ಬೇಗ ಮುಗಿಸಿ. ನಾವು ಎಂಟು ಗಂಟೆಗೆ ಇಲ್ಲಿಂದ ಬಿಡಬೇಕು.